ಓ.ಎಸ್. ನಂ. 20/2020

ಡಿ.ಡಬ್ಲ್ಯೂ: 01 (ಸುಗ್ಗಮ್ಮ)

ದಿನಾಂಕ: 05-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ – ಶ್ರೀ ಡಿ ಜಿ ಬಿ ವಕೀಲರಿಂದ.**

ದೊಡ್ಡಯಲ್ಲಪ್ಪ ನನ್ನ ಮಾವ. ಆತನ ಹೆಂಡತಿಯ ಹೆಸರು ಗಂಗಮ್ಮ. ಅವರಿಗೆ 5 ಜನ ಮಕ್ಕಳು ಅವರುಗಳೆಂದರೆ ತಿಪ್ಪೇಸ್ವಾಮಿ, ಮಹಾಂತೇಶ, ತಿಮ್ಮಪ್ಪ, ರೇಣುಕಮ್ಮ ಮತ್ತು ಬಸಮ್ಮ. ದಾವಾ ಆಸ್ತಿ ಜಂಟಿ ಕುಟುಂಬದ ಆಸ್ತಿ ಎಂದರೆ ಅದು ನಮ್ಮ ಭಾಗಕ್ಕೆ ಬಂದ ಆಸ್ತಿ. ದೊಡ್ಡಯಲ್ಲಪ್ಪನ ಮಕ್ಕಳ ಮಧ್ಯೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪಾಲು ವಿಭಾಗವಾಗಿದೆಯೇ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಮೂಲತಃ ದೊಡ್ಡಯಲ್ಲಪ್ಪನ ಆಸ್ತಿ ಎಂದರೆ ಹೌದು. ಅಸಲು ದಾವೆ 76/2009 ರ ದಾವೆಯನ್ನು ನಾನು ನನ್ನ ಗಂಡ ಹಾಗೂ ಒಡಹುಟ್ಟಿದವರ ವಿರುದ್ಧ ಭಾಗಕ್ಕಾಗಿ ಸಲ್ಲಿಸಿದ್ದೆ. ಆದರೆ ಆತನ ಅಕ್ಕತಂಗಿಯರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಆ ದಾವೆಯನ್ನು ಸರ್ವೆ ನಂಬರ 23/ಬಿ/1 ಗೆ ಸಂಬಂಧಿಸಿದಂತೆ ಸಲ್ಲಿಸಿದ್ದೆ ಎಂದರೆ ಹೌದು.

ಪ್ರತಿವಾದ ಪತ್ರದಲ್ಲಿ ಕೆಲವೊಂದು ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದು ಹೇಳಿದ್ದು , ಆ ಆಸ್ತಿಗಳಿಗೆ ಸಂಬಂಧಿಸಿದಂತೆ ನಾನು ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಸದರಿ ಆಸ್ತಿಗಳು ಯಾರಿಗೆ ಸಂಬಂಧಿಸದ್ದು ಎಂದು ನನಗೆ ಗೊತ್ತಿಲ್ಲ ಎಂದರೆ ಅದು ನಮ್ಮ ಮಾವನಿಗೆ ಸಂಬಂಧಿಸಿದ ಆಸ್ತಿ. ಹಿಂದಿನ ದಾವೆಯಲ್ಲಿ ಇತರ ಸರ್ವೆ ನಂಬರಗಳನ್ನು ಯಾಕೆ ಸೇರಿಸಿಲ್ಲ ಎಂದರೆ ನನಗೆ ಬೇಕಿದ್ದ ಹೊಲವನ್ನು ಸೇರಿಸಿ ಪಾಲು ತೆಗೆದುಕೊಂಡಿದ್ದೆ. 2009 ರಲ್ಲಿ ನಮ್ಮ ಮಾವನಿಗೆ ಸೇರಿದ ಆಸ್ತಿಗಳಾದ ಸರ್ವೆ ನಂಬರ 91 ಬಿ, 91 ಎ, 23/ಡಿ ಹಾಗೂ 23/ಇ ಆಸ್ತಿಗಳನ್ನು ಬಿಟ್ಟು ಮಾಡಿಕೊಂಡಂತಹ ರಾಜಿ ಕಾನೂನುಬದ್ಧವಾಗಿಲ್ಲ ಎಂದರೆ ಅವರೆಲ್ಲಾ ಒಪ್ಪಿಕೊಂಡು ಮಾಡಿಕೊಟ್ಟಿರುತ್ತಾರೆ. ವಾದಿಗಳಾದ ರೇಣುಕಮ್ಮ ಮತ್ತು ಬಸಮ್ಮರವರಿಗೆ ಸಮಾನಾದ ಭಾಗ ಇದೆ ಎಂದರೆ ಅದನ್ನು ನನಗೆ ನೀಡಿರುತ್ತಾರೆ, ನಮ್ಮ ಮಾವನಿಗೆ ಸೇರಿದ ಉಳಿದ 14 ಎಕರೆ ಆಸ್ತಿಯಲ್ಲಿ ಅವರು ಭಾಗ ತೆಗೆದುಕೊಳ್ಳಬಹುದು.

ಪಾಟೀ ಸವಾಲು ಮುಕ್ತಾಯ. ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.